# ನಿಮ್ಮದೇ ಸ್ವಂತ ವೆಬ್‌ಸೈಟ್ ಸ್ಥಾಪಿಸಲು ಒಂದು ಕೈಪಿಡಿ:




ಅದರಲ್ಲಿ ಏನೇನು ಘಟ್ಟಗಳಿವೆ ನೋಡೋಣ ಬನ್ನಿ:

*ನಾಗೇಶ್ ಕುಮಾರ್ ಸಿಎಸ್

**https://nageshwrites.com**

## ಪರಿವಿಡಿ

ಮೊದಲು ನೀವೊಂದು ನಿವೇಶನ/ತಾಣ ಹುಡುಕಬೇಕು ........ 3

ನಾವು ವೆಬ್ ಸೈಟ್ ಕೊಳ್ಳಬೇಕಾಗಿದ್ದೇಕೆ? ........ 5

ಇರಲಿ, ಮುಂದೆ ಹೋಗುವಾ! ........ 6

SiteGround ಆಯ್ದುಕೊಳ್ಳಿ ........ 8

*ನಿಮಗೆ ಗೊತ್ತೆ?* 

***ತಿಂಗಳಿಗೆ 300 ರೂ. ಬಾಡಿಗೆ ಖರ್ಚು ಮಾಡಿದರೆ ಸಾಕು! ಒಂದು ಮುದ್ದಾದ ವೆಬ್ ಸೈಟ್ ಮಾಲೀಕರಾಗುವಿರಿ...***

*ಬಹಳ ದಿನಗಳಿಂದ ಯೋಚಿಸುತ್ತಿದ್ದೀರೇನೋ..ನನ್ನದೂ ಒಂದು ಸೈಟ್ ಇದ್ದರೆ, ಅದರಲ್ಲಿ ನನಗೆ ಬೇಕಾದುದರ ಬಗ್ಗೆ ಬರೆದೋ, ಜಾಹೀರಾತು ಕೊಟ್ಟೋ ಆದಾಯ ಹುಟ್ಟಿಸಬಹುದು ಎಂದು?*

*ಹಾ?*

**ಯೋಚಿಸುವುದು ನಿಲ್ಲಿಸಿ, ಶುರು ಮಾಡಿಯೇ ಬಿಡಿ..!!**

## ಮೊದಲು ನೀವೊಂದು ನಿವೇಶನ/ತಾಣ ಹುಡುಕಬೇಕು...

ಇದಕ್ಕಾಗಿ ಪ್ರಪಥಮವಾಗಿ ನೀವು ವೆಬ್ ಹೋಸ್ಟಿಂಗ್ ಸರಬರಾಜುದಾರ ಸಂಸ್ಥೆಯ ಪ್ಲಾನ್ ಗಳನ್ನು ಪರೀಕ್ಷಿಸಬೇಕು.


ನಾವು ಪ್ರಪಂಚದ ಈಗಿನ ಅತ್ಯಂತ ಜನಪ್ರಿಯ ಅಂತರ್ಜಾಲ ವೇದಿಕೆಯಾದ ವರ್ಡ್ ಪ್ರೆಸ್ ಆರಿಸಿಕೊಳ್ಳೋಣ..


ಅಂತರ್ಜಾಲದ ಅರ್ಧಕ್ಕೂ ಹೆಚ್ಚಿನ ತಾಣಗಳು ಈ ವ್ಯವಸ್ಥೆಯನ್ನು ಬಳಸುತ್ತಿವೆ ಎಂಬ ದಾಖಲೆಗಳಿವೆ.

ಇದನ್ನು ಸಜ್ಜುಗೊಳಿಸುವುದು, ಕಾರ್ಯಪ್ರವರ್ತಗೊಳಿಸುವುದು ಸುಲಭ ಮತ್ತು ಅತಿ ಶೀಘ್ರ ಕೂಡಾ.

ಅದಕ್ಕೆ ತಕ್ಕುದಾದ SiteGround ಎಂಬ ಹೋಸ್ಟ್ ಸಂಸ್ಥೆಯ ವ್ಯವಸ್ಥೆಯನ್ನು ನಾನು ನಿಮಗೆ ಇಂದು ವರ್ಣಿಸುತ್ತೇನೆ, ಉದಾಹರಣೆಗಾಗಿ.

ಇದು ನನ್ನ ಆಯ್ಕೆ ಮತ್ತು ನಿಮಗಾಗಿ ನನ್ನ ಶಿಫಾರಸು ಕೂಡಾ!




ಈ ಸಂಸ್ಥೆಯ ಕೊಡುಗೆಯಲ್ಲಿ ಏನು ವಿಶೇಷ ಎನ್ನುತ್ತೀರೇನೋ?

ಇದೆ, ನಿಮ್ಮ ಸೈಟಿನ ಉಚಿತ ನಾಮಕರಣ:

ಯಾವುದೇ ಹೋಸ್ಟಿಂಗ್ ಕೊಂಡುಕೊಂಡರೆ, ನಿಮ್ಮ: ಮೊದಲ ಬೇಡಿಕೆ:-"ಅದರ ಡೊಮೈನ್ ಹೆಸರು ಅಲ್ಲವೆ?" ( ಅಂದರೆ ನಿಮ್ಮದೇ ಹೆಸರಿನ ಸೈಟು..ಯಾಹೂ.ಕಾಂ, ಹಾಟ್ ಮೈಲ್.ಕಾಂ ಅಥವಾ ನನ್ನ ಸೈಟಿನಂತೆ..ನಾಗೇಶ್ಸೈಟ್ಸ್.ಕಾಂ.). ಅದನ್ನು ಅವರು ಉಚಿತವಾಗಿ ಕೊಡುತ್ತಿದ್ದಾರೆ, ಇಲ್ಲದಿದ್ದರೆ ಅನ್ಯರಿಂದ ಕೊಳ್ಳಬೇಕಾಗಿತ್ತು.

ಇವರ ಸಂಪರ್ಕ/ ಸರ್ವರ್ ವ್ಯವಸ್ಥೆ ಅಮೆರಿಕಾ, ಯೂರೋಪ್ ಅಲ್ಲದೇ ಏಷ್ಯಾದಲ್ಲೂ ಇದೆ..ನೀವಿರುವ ಸ್ಥಳಕ್ಕೆ ಹತ್ತಿರವಾಗುವಂತೆ. ಅದರಿಂದ ನಿಮ್ಮ ವೆಬ್ ಸೈಟ್ ಬಹಳ ಬೇಗನೆ , ತಡವಿಲ್ಲದೇ ಲೋಡ್ ಆಗುವುದು, ಅಂತರ್ಜಾಲ ಬ್ರೌಸರುಗಳಲ್ಲಿ ( IE, FireFox ಇಲ್ಲವೇ Chrome ) ಕಾಣಿಸಿಕೊಳ್ಳುವುದು.

ಇನ್ನು ನಿಮಗೇನೂ ತೊಂದರೆಯಾಗದಂತೆ **ಒಂದೇ ಕ್ಲಿಕ್ ಬಟನ್** ಒತ್ತಿ ವರ್ಡ್ ಪ್ರೆಸ್ ಸೈಟಿನ ವ್ಯವಸ್ಥೆಯನ್ನು ಸ್ಥಾಪಿಸಿ ನಿಮ್ಮ ಕೈಗೆ ರೆಡಿಮೇಡ್ ಆಗಿ ಕೊಡುತ್ತಾರೆ. ನಿಮಗೆ ಐ ಟಿ/ ಕಂಪ್ಯೂಟರಿನ ವಿಶೇಷ ಜ್ಞಾನವೇನೂ ಬೇಡ..ಸಾಮಾನ್ಯ ಜ್ಞಾನವಿದ್ದರೂ ಸಾಕು, ಮೊದಲಿಗೆ,

ನಿಮಗೆ ಮೊದಲೇ ನಿಮ್ಮ ಸೈಟ್ ಕಟ್ಟುವಾಗ ಏನಾದರೂ ತೊಂದರೆಯಾದರೆ 24ಗಂಟೆ x 7 ದಿನವೂ ಅವರ ಜತೆ ಚ್ಯಾಟ್ ( ಸಂವಾದ) ಮಾಡಿ ತಕ್ಷಣ ನಿಮ್ಮ ಸಮಸ್ಯೆ/ ಅನುಮಾನ ಪರಿಹಾರ ಮಾಡಿಕೊಳ್ಳಬಹುದು. ನಾನು ಅವರೊಂದಿಗೆ ಹಲವು ಬಾರಿ ಚರ್ಚಿಸಿದ್ದೇನೆ, ನಮ್ಮ ಕಷ್ಟ ಏನೇ ಇದ್ದರೂ ಬೇಗ ಅಲ್ಲಿಂದಲ್ಲೇ ಬಗೆಹರಿಸುತ್ತಾರೆ.

ಇದಕ್ಕಾಗಿಯೆ ಇವರಿಗೆ ಕೊಡುವ ದುಡ್ಡು ವ್ಯರ್ಥವಲ್ಲ ಎಂದು ನನಗನಿಸಿದ್ದು.!

## ನಾವು ವೆಬ್ ಸೈಟ್ ಕೊಳ್ಳಬೇಕಾಗಿದ್ದೇಕೆ?

*ನೀವು ಕೇಳಬಹುದು! … ಬರೆಯಲು ವರ್ಡ್ ಪ್ರೆಸ್.ಕಾಂ ಮತ್ತು ಬ್ಲಾಗರ್ ನಲ್ಲಿ ಉಚಿತವಾಗಿ ಎಲ್ಲರಿಗೂ ಬ್ಲಾ ಗ್ ಕೊಡುತ್ತಾರಲ್ಲ?*

ಕಾರಣಗಳು ಹೀಗಿವೆ:

ಅಲ್ಲಿ ನಿಮ್ಮ ಹೆಸರಿನ ಜತೆಗೆ ಅವರ ಸಂಸ್ಥೆಯ ಹೆಸರು ಬ್ಲಾಗ್ ಸ್ಪಾಟ್.ಕಾಂ ಮತ್ತು ವರ್ಡ್ ಪ್ರೆಸ್.ಕಾಂ ಎಂದು ಸೇರಿಸಿಬಿಡುತ್ತಾರೆ. ( ಉದಾ."ನಿಮ್ಮಹೆಸರು.ಬ್ಲಾಗ್ ಸ್ಪಾಟ್" ಅಥವಾ "ನಿಮ್ಮಹೆಸರು.ವರ್ಡ್ಪ್ರೆಸ್ಸ್" ( yourname.blogspot.com, yourname.wordpress.com ಇತ್ಯಾದಿ).

ಅಲ್ಲದೇ ಸೀಮಿತ (limited) ಅಧಿಕಾರ, ವಿನ್ಯಾಸ ಮತ್ತು ಅವರ ಜಾಹೀರಾತುಗಳನ್ನು ಮಾತ್ರ ನಿಮಗೆ ನಿಮ್ಮ ಉಚಿತ ಸೈಟಿನಲ್ಲಿ ಕೊಡುತ್ತಾರೆ.

ನೀವು ನೇರವಾಗಿ ಅಂತಾ ಬ್ಲಾಗುಗಳಿಂದ ಹಣ ಸಂಪಾದನೆಯಾಗಲಿ,ಅದರ ವಿನ್ಯಾಸ, ವ್ಯವಸ್ಥೆಯ ಬದಲಾವಣೆಯಾಗಲಿ ಮಾಡುವಂತಿಲ್ಲ...ಅವರ ಜಾಹೀರಾತುಗಳನ್ನು ತೆಗೆಯುವಂತೆಯೂ ಇಲ್ಲ....

ಅದಕ್ಕಾಗಿಯೇ ನಾನು ಹೆಚ್ಚು ಸಂಶೋಧನೆ ಮಾಡಿ ಒಳ್ಳೆಯ ಹೋಸ್ಟ್ ಕಂಪನಿಯಾದ ಸೈಟ್ ಗ್ರೌಂಡ್ ಮೊರೆ ಹೊಕ್ಕಿದ್ದು. ಹಾಗೆಯೇ ಮಾರ್ಕೆಟ್ಟಿನಲ್ಲಿ ಹಲವಾರು ಕಡಿಮೆ ಬೆಲೆಯ ಹೋಸ್ಟ್ ಕಂಪನಿಗಳಿದ್ದಾವೆ, (ಅವುಗಳ ಹೆಸರನ್ನು ಹೇಳುವುದು ಬೇಡ) ಆದರೆ ಅವರ ಕಳಪೆ ಸೇವೆ, ಕೀಳು ಗುಣಮಟ್ಟದಿಂದ ನಾವು ಒಂದೆರಡು ವರ್ಷದ ಫೀಸ್ ಕಟ್ಟಿದ ನಂತರ ದುಡ್ಡು ಕೊಟ್ಟು ಕೈ ಸುಟ್ಟಿ ಕೊಳ್ಳಬಾರದು ಎಂದು ಹಲವು ಅನುಭವಿಗಳ ಸಲಹೆಯನ್ನು ನಾನು ಕೇಳಿದ್ದೇನೆ.

ವರ್ಡ್ ಪ್ರೆಸ್ ನಂತಾ ವಿಶ್ವವಿಖ್ಯಾತ ಜನಪ್ರಿಯ ವ್ಯವಸ್ಥೆಯ ಅಧಿಕೃತ ಹಾಗು ಶಿಫಾರಸು ( recommended) ಮಾಡಲ್ಪಟ್ಟ ಹೋಸ್ಟ್ ಸಂಸ್ಥೆ ಈ ಸೈಟ್ ಗ್ರೌಂಡ್ ಆಗಿದೆ..

## ಇರಲಿ, ಮುಂದೆ ಹೋಗುವಾ!

ನೀವು ಹೊಸಬರಾದ್ದರಿಂದ, ನಿಮ್ಮ ಮೊದಲ ಸೈಟ್ ಇದಾಗಿರಬಹುದು..ಆದ್ದರಿಂದ ನೀವು ಚಿಕ್ಕದಾದ **startup plan** ಇಲ್ಲವೆ ಸ್ವಲ್ಪ ಧೈರ್ಯಮಾಡಿ **Growbig plan** ಆರಿಸಿಕೊಂಡರೆ ಸಾಕು. ಅದಕ್ಕೆ ತಕ್ಕ ಸೌಲಭ್ಯಗಳು ಮೇಲಿನ ಚಿತ್ರದಲ್ಲಿದೆ.. ಕಾಸಿಗೆ ತಕ್ಕ ಕಜ್ಜಾಯ ಅನ್ನುವಂತೆ, ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ..ಪರವಾಗಿಲ್ಲ, ಬಿಡಿ.

ಮೊದಲಿಗೆ ಒಂದು ವರ್ಷ ಅವಧಿಗೆ ಟೆಸ್ಟ್ ಮಾಡಿ ನೋಡುವಿರೋ..ಇಲ್ಲವೆ ಎರಡು ವರ್ಷವಾದರೂ ಇದರ ಮೇಲೆ ಕೆಲಸ ಮಾಡುತ್ತೇನೆ ಎನ್ನುವಿರೋ?.. ಅದೂ ನಿಮ್ಮಿಷ್ಟ.. ಒಂದರಿಂದ ಮೂರು ವರ್ಷದವರೆಗೆ ಆಯ್ದುಕೊಳ್ಳಬಹುದು.

ಮೊದಲ ಆಯ್ಕೆಗೆ ತಿಂಗಳಿಗೆ ಸುಮಾರು ನಾಲ್ಕು ಡಾಲರ್ (3.95) ಅಥವಾ ಎರಡನೆಯದಕ್ಕೆ ಆರು ಡಾಲರ್ (5.95) ಆಗುತ್ತದೆ.

**ಮೊದಲನೆಯದಂತೂ ಮಾರ್ಕೆಟ್ಟಿನಲ್ಲಿ ಅತಿ ಕಡಿಮೆ ಬೆಲೆಯ ಪ್ಲಾನ್.( ತಿಂಗಳಿಗೆ ~4 ಡಾಲರ್, ಅಂದರೆ 270/- ರೂ). ಹೊಸಬರಿಗೆ ಒಂದೇ ಬ್ಲಾಗ್ ಸೈಟ್ ಸಾಕಪ್ಪ ಎನ್ನುವವರಿಗೆ...**

**ಎರಡನೆಯ ಪ್ಲಾನ್ ಸ್ವಲ್ಪ ಹೆಚ್ಚು ಆಶೋತ್ತರಗಳನ್ನು ಇಟ್ಟುಕೊಂಡು ಸ್ವಲ್ಪ ಹಣ ಸಂಪಾದನೆಯನ್ನು ಹೆಚ್ಚು ಕಾಲ ಟ್ರೈ ಮಾಡೋಣ, ಎರಡು ಮೂರು ಸೈಟ್ ಕಟ್ಟೋಣ...ಎಂದಿರುವವರಿಗೆ ( ತಿಂಗಳಿಗೆ 330/- ರೂ ಅಷ್ಟೇ)**

ನನ್ನ ಸಲಹೆ ಬೇಕಾದರೆ: ಒಂದು ವರುಷದ ಗ್ರೋ ಬಿಗ್ ಪ್ಲಾನ್ ಕೊಳ್ಳಿರಿ..ನಾನು ಅದನ್ನೆ ಇಲ್ಲಿ ಉದಾಹರಣೆಯಾಗಿ ತೆಗೆದುಕೊಂಡಿದ್ದೇನೆ. ಅವರೇ ಬೆಲೆಯಲ್ಲಿ ೬೦% ವಿನಾಯತಿ ಕೊಟ್ಟಿದ್ದಾರೆ!..ಆದರೆ ಮೊದಲ ಬಾರಿಗೆ ಕೊಳ್ಳವಾಗ ಮಾತ್ರ ಈ ವಿನಾಯ್ತಿ..ಹಾಗಾಗಿ ಈಗ ಮೊದಲೇ ಕೊಳ್ಳುವುದು ಉಚಿತ; ನಾವು ಹಣ ಉಳಿಸಬಹುದು!

*ನೀವು ನಿಮ್ಮ ಬ್ಯಾಂಕಿನ ಕ್ರೆಡಿಟ್ ಕಾರ್ಡ್ ನಲ್ಲಿ ಕೊಂಡರೆ ಅದೇ ಡಾಲರಿಗೆ ತಕ್ಕ ಭಾರತೀಯ ರೂಪಾಯಿಗೆ ವಿನಿಮಯ ರೇಟಿನಂತೆ ಬದಲಾಯಿಸಿಕೊಳ್ಳುತ್ತದೆ, ನಮಗೇನೂ ತಲೆ ನೋವಿಲ್ಲ.*

ನಾನು ಇದರ ಪ್ರಕಾರ ಒಂದು ವರ್ಷದ ಬಾಡಿಗೆ ಮತ್ತು ಐ ಡಿ ಪ್ರೊಟೆಕ್ಷನ್ ಮತ್ತು ಡೊಮೈನ್ ಅಪ್ ಗ್ರೇಡ್ ಎಂಬ ಎರಡು ಮುಖ್ಯ ಅಧಿಕ ವ್ಯವಸ್ಥೆಯೂ ಸೇರಿಸಿ ಮೊತ್ತ **6000/- ರೂ**. ಕೊಟ್ಟಿದ್ದೇನೆ.


ಇದಕ್ಕೆ ನನಗೆ ದೊರೆತ ಅಮೂಲ್ಯ ಸೌಲಭ್ಯಗಳೆಂದರೆ: ಮುಂದಿರುವ ನೀವೇ ಚಿತ್ರಗಳನ್ನು ನೋಡಿ!

ಮೊದಲನೆ ಪ್ರೊಫೆಶನಲ್ ವೆಬ್ ಸೈಟ್ ಮಾಲೀಕನಿಗೆ ಸಾಕಾಗುವಷ್ಟು ಅವರೇ ಕೊಟ್ಟುಬಿಟ್ಟಿದ್ದಾರೆ. ನಮಗೇ ಬಿಟ್ಟರೆ ಇದೆಲ್ಲಾ ಹೊಳೆಯುತ್ತಲೇ ಇರಲಿಲ್ಲವೇನೋ!


| **Start Your Website**<br>**Choose Your Plan** | **StartUp**<br>60% OFF the regular $9.95/mo.<br>**$3.95/Mo.** | **GrowBig**<br>60% OFF the regular $14.95/mo.<br>**$5.95/Mo.** | **GoGeek**<br>60% OFF the regular $29.95/mo.<br>**$11.95/Mo.** |
|---|---|---|---|
| **Order This Plan** | ORDER | ORDER | ORDER |
| **We Have All Essential Features** | | | |
| Suitable Number of Monthly Visits | ~ **10,000** Visits | ~ **25,000** Visits | ~ **100,000** Visits |
| Web Space | **10GB** Space | **20GB** Space | **30GB** Space |
| Websites Hosted | One | Unlimited | Unlimited |
| Data Transfer | Unmetered | Unmetered | Unmetered |
| Free Drag & Drop Builder | ✔ | ✔ | ✔ |
| Free Site Transfer or CMS Install | ✔ | ✔ | ✔ |
| Free Email Accounts | ✔ | ✔ | ✔ |
| Unlimited MySQL DB | ✔ | ✔ | ✔ |
| Unlimited Sub and Parked Domains | ✔ | ✔ | ✔ |
| cPanel & Softaculous | ✔ | ✔ | ✔ |
| 30 Days Money Back | ✔ | ✔ | ✔ |
| **We give you more WordPress features** | | | |
| WordPress Free Install | ✔ | ✔ | ✔ |
| WordPress Free Transfer | ✔ | ✔ | ✔ |
| WordPress Autoupdate | ✔ | ✔ | ✔ |
| WordPress Advanced Security | ✔ | ✔ | ✔ |
| WordPress Related Support | ✔ | ✔ | ✔ |
| WP-CLI Pre-installed | ✔ | ✔ | ✔ |
| WordPress Special Cache PREMIUM | ✖ | ✔ | ✔ |
| One-click WordPress Staging GEEKY | ✖ | ✖ | ✔ |
| SG-Git for WordPress repo creation GEEKY | ✖ | ✖ | ✔ |


## SiteGround ಆಯ್ದುಕೊಳ್ಳಿ

ಈಗ ಅಲ್ಲಿ ನಿಮ್ಮ ಖಾತೆ ತೆರೆದು, ಇ ಮೈಲ್ ಮತ್ತು ಪ್ರವೇಶ ಪದ ಕೊಟ್ಟು ಹಣ ಪಾವತಿ ಮಾಡುವ ಪುಟಗಳಿವೆ..ಅಲ್ಲಿ ನಿಮ್ಮ ವಿವರಗಳನ್ನು ದಾಖಲಿಸಿಕೊಳ್ಳಿ.





ಇನ್ನು ನೀವು **GrowBig plan** ಕೊಳ್ಳಲು ಮುಂದಾದಿರಿ ಅಂದುಕೊಳ್ಳಿ ಮುಂದೆ. ಕಾರ್ಡ್ ಮೂಲಕ ಹಣ ಸಲ್ಲಿಸಿ, ಅದರಲ್ಲಿ ಏನೆಲ್ಲ ಸೇವೆಗಳು ಸೇರಿವೆ ಎಂದು ವಿವರಗಳಿರುತ್ತವೆ:








ನಿಮ್ಮ ಕ್ರೆಡಿಟ್ ಕಾರ್ಡಿನಲ್ಲಿ ಹಣ ಪಾವತಿ ಮಾಡಿದರೆ ನಿಮ್ಮ ಇ ಮೈಲ್ ಗೆ ಎರಡು ಬಾರಿ ಮೈಲ್ ಕಳಿಸಿ ಖಚಿತಪಡಿಸುತ್ತಾರೆ

ನಿಮ್ಮ ಬಿಲ್ ಮತ್ತು ನಿಮ್ಮ ಡೋಮೈನ್ ನಾಮಕರಣ ಖಚಿತ ಪಡಿಸಲು ಮೈಲ್ ಕಳಿಸುತ್ತಾರೆ: ಅದಕ್ಕೆ ಕ್ಲಿಕ್ ಮಾಡಿ ಒಪ್ಪಿಗೆ ಕೊಡಿ.




Congrats, you are now a SiteGround client!

Dear [redacted]

Thank you for ordering SiteGround Hosting services. Here is some useful information on how to get started with your new hosting account with us.

**Login Information**

You can log into your SiteGround Customer Area and proceed to complete your new account setup:

**Username:** [redacted]@gmail.com
**Password:** The one you chose during the sign-up process.


If you have forgotten your password, simply go to our Password Lookup page to reset it.


Login to Customer Area

ಮೇಲಿನ ಇ ಮೈಲ್ ನಲ್ಲಿ “ಲಾಗಿನ್” ಕ್ಲಿಕ್ ಮಾಡಿ. ಅಲ್ಲಿಂದ ನಿಮ್ಮ ವೆಬ್ ಸೈಟ್ ಅನಾವರಣ ಸುಲಭಸಾಧ್ಯ.

ನಿಮ್ಮ ಖಾತೆಯ ಪುಟದಲ್ಲಿ ಕೆಳಕಂಡ ಆಯ್ಕೆಗಳಿರುತ್ತವೆ;


ನೀವು **Wordpress** ಕ್ಲಿಕ್ ಮಾಡಿ: ಒಂದೊಂದೇ ಮೆಟ್ಟಿಲುಗಳನ್ನು ಆಯ್ದುಕೊಳ್ಳುತ್ತಾ ಸಾಗಿ.








ನಿಮ್ಮ ಸೈಟಿನ ಹೆಸರು, ಅದರ ಟ್ಯಾಗ್ ಲೈನ್, ವಿಶೇಷ ಶೀರ್ಷಿಕೆ ಏನಿರಬೇಕು ಎಂದು ಬರೆಯಿರಿ! ಮಿಕ್ಕಿದ್ದೆಲ್ಲಾ ಅದೇ ತುಂಬಿಸಿರುತ್ತದೆ.

**http** ಅಥವಾ **https** ಯಾವುದಾದರೂ ಆಯ್ದುಕೊಳ್ಳಬಹುದು… ಉಚಿತವಾಗಿ ಇವರೇ HTTPS ಕೊಡುವುದರಿಂದ ಹೆಚ್ಚು ಸುರಕ್ಷಿತವಾದ ಇದನ್ನೇ ಆರಿಸಬಹುದು.



ಆಗ ಸ್ವಯಂಚಾಲಿತವಾಗಿ ನಿಮ್ಮ ವೆಬ್ ಸೈಟ್ ಅನಾವರಣಗೊಂಡು ಅದು ಮುಗಿದ ನಂತರ ಈ ಸಂದೇಶ ಕಾಣಿಸುತ್ತದೆ...



**Congratulations, the software was installed successfully**

WordPress has been successfully installed at :
http:/[redacted]com
Administrative URL : http:/[redacted]m/wp-admin/

We hope the installation process was easy.

**NOTE**: Softaculous is just an automatic software installer and does not provide any support for the individual software packages. Please visit the software vendor's web site for support!

Regards,
Softaculous Auto Installer

Return to Overview

**Tell your friends about your new site :**

I just installed a new #WordPress at @SiteGround: http://[redacted]y.com

Tweet!

## ಇಲ್ಲಿಗೆ ನೀವೊಂದು ಹೊಸ ವೆಬ್ ತಾಣದ ಒಡೆಯರಾದಿರಿ....ಅಭಿನಂದನೆಗಳು!

ಇದೀಗ ನೀವು ಹೊಸ ವರ್ಡ್-ಪ್ರೆಸ್ಸ್ ವೆಬ್ ಸೈಟ್ ಸ್ಥಾಪಿಸುವುದು ಹೇಗೆ ಎಂದು ಕಲಿತಿರಿ..

ಆದರೆ ಇದೀಗ ಖಾಲಿಮನೆಯಂತೆ, ಇನ್ನೂ ನಾವು ಸೈಟ್ ಪೂರ್ತಿ ಅಳವಡಿಸಿಲ್ಲ..

ಅದಕ್ಕಾಗಿ ಮುಂದಿನ ಪಾಠ:

## ನನ್ನ ಮೊದಲ ವೆಬ್ ಸೈಟ್ ಒಳಗೆ ಹೋಗಿ ಏನೆಲ್ಲಾ ಮಾಡಲಿ, ಹೇಗೆ ಪ್ರಕಟಿಸಲಿ?